ಫುಲ್‌ಸ್ಟಾಪು, ಕಾಮಾ ಕೂಡ ಚೇಂಜಿಲ್ಲ. ಹೆಂಗ್ರಿ ಕೇಳೋದು?' ಎಂದು ನಮಗೇ ಪ್ರಶ್ನೆ ಹಾಕುತ್ತಾರೆ. ತಮ್ಮ ಭಾಷಣ ಬೆತ್ತದಿಂದ ತುಂಬಿದ ಸಭಾಂಗಣವನ್ನು ಕೆಲವೇ ಕ್ಷಣಗಳಲ್ಲಿ ನಿರ್ಜನಗೊಳಿಸಬಲ್ಲ ಇಂತಹ ಮಹನೀಯರಿಂದ ಪೊಲೀಸ್ ಇಲಾಖೆ ಕಲಿಯುವುದು ಬಹಳ ಇದೆ.

ಉಚಿತ ಮನರಂಜನೆ ಸಿಗುವ ಮತ್ತೊಂದು ಐಟಮ್ಮೆಂದರೆ ಅತಿಥಿಗಳ ಪರಿಚಯ. ಒಮ್ಮೆ ಒಬ್ಬ ನಿರೂಪಕ ನನ್ನ ಮೇಲಣ ಅಭಿಮಾನದಿಂದ, 'ಶ್ರೀಯುತರು ಕನ್ನಡಿಗರಲ್ಲದಿದ್ದರೂ ಮಕ್ಕಳನ್ನು ಕನ್ನಡದ ಮಾಧ್ಯಮದಲ್ಲಿ ಓದಿಸಿದ್ದಾರೆ. ಸುಂದರ ಕನ್ನಡದಲ್ಲಿ ಬರೀತಾರೆ. ಸುಭಗವಾಗಿ ಮಾತಾಡ್ತಾರೆ. ಅವರ ಬಾಯಲ್ಲಿ ಕಸ್ತೂರಿ ಕನ್ನಡ ಕೇಳ್ತಾ ಇದ್ರೆ ಮುಸ್ಲಿಮರೆಲ್ಲ ಯಾಕೆ ಹೀಗಿಲ್ಲ ಎಂದು ಬೇಜಾರಾಗುತ್ತದೆ' ಎಂದನು. ಅದು ಹೊಗಳಿಕೆಯೊ ತೆಗಳಿಕೆಯೊ ಅರಿಯದೆ ಕಂಗಾಲಾದೆ. ಇನ್ನೊಂದು ಸಭೆಯಲ್ಲಿ ನಿರೂಪಕಿಯೊಬ್ಬರು ಯಾರದೊ ಪುಸ್ತಕಗಳನ್ನು ನನ್ನ ಖಾತೆಗೆ ಜಮಾ ಹಾಕುತ್ತಿದ್ದರು. ಸಭೆಯಲ್ಲಿದ್ದವರು ಯಾರೂ ಅವನ್ನು ಓದಿಲ್ಲವಾಗಿ ತೆಪ್ಪಗಿದ್ದೆ. ಆದರೆ 'ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಕಲಿತವರು' ಎಂದಾಗ ಎಚ್ಚೆತ್ತು 'ಕ್ಷಮಿಸಿ, ನಾನು ಹೈದರಾಬಾದನ್ನೇ ನೋಡಿಲ್ಲ' ಎಂದೆ. 'ಸ್ಸಾರಿ ಸರ್, ನಿಮ್ಮ ಹೆಸರಿನ ಆಧಾರದಲ್ಲಿ ಅಲ್ಲಿ ಓದಿರಬಹುದು ಅಂತ ಊಹಿಸಿದೆ. ಆದರೇನಾತು ತಗೊರಿ. ಅದೂ ಒಳ್ಳೆಯ ವಿಶ್ವವಿದ್ಯಾಲಯವೇ' ಎಂದು ಸಮಜಾಯಿಶಿ ಕೊಟ್ಟರು.

ಒಂದು ಪರಿಚಯ ಭಾಷಣ ಜನ್ಮಾಪಿ ಮರೆಯಲಾರೆ. ಕಾಲೇಜಿಗೆ ಸಮೀಪದಲ್ಲಿ ಜಲಪಾತವಿದ್ದ ಕಾರಣ, ನಿಸರ್ಗ ಸೌಂದರ್ಯ ಸವಿದಂತೆಯೂ ಆಯಿತು ಎಂದು ಭಾಷಣಕ್ಕೆ ಒಪ್ಪಿಕೊಂಡಿದ್ದೆ. ಭೋಳೆ ಸ್ವಭಾವದ ಹಿರಿಯ ಅಧ್ಯಾಪಕರೊಬ್ಬರು ಅಲ್ಲಿ ಮೊದಲಿಂದಲೂ ಅತಿಥಿಗಳನ್ನು ಪರಿಚಯಿಸುವ ಕಾಯಕವನ್ನು ಮಾಡಿಕೊಂಡು ಬಂದಿದ್ದರು. ಅರ್ಧಗಂಟೆ ಕಮ್ಮಿಯಿಲ್ಲದೆ ಅರಾಜಕ ವಿಧಾನದಲ್ಲಿ ಮಾತಾಡುವುದಕ್ಕೆ ಹೆಸರಾಗಿದ್ದ ಶ್ರೀಯುತರು, ನನ್ನ ಸಾಧನೆಯನ್ನೆಲ್ಲ ಸಂಗ್ರಹಿಸಿ ಪ್ರಬಂಧ ಸಿದ್ಧಪಡಿಸಿದ್ದರು. ಈ ನಡುವೆ 'ಅತಿಥಿಗಳು ಖ್ಯಾತನಾಮರಾದ ಕಾರಣ ಪರಿಚಯದ ಅಗತ್ಯವಿಲ್ಲ' ಎಂದು ಹೇಳಿ ಪ್ರಿನ್ಸರು ಅವರ ಐಟಮ್ಮನ್ನು ರದ್ದುಮಾಡಿದ್ದಾರೆ. ಇದರ ಹಿಂದು ಮುಂದರಿಯದೆ ಮಾರಮ್ಮನಿಗೆ ಬಿಟ್ಟ ಕೋಣನಂತೆ ನಾನು ನೆಟ್ಟಗೆ ಹೋದೆ. ಗೇಟಿನಲ್ಲಿಯೆ ಕಾಯುತ್ತಿದ್ದ ಶ್ರೀಯುತರು, ತಮಗೆ ವೇದಿಕೆ ಹತ್ತದಂತೆ ಫಿತೂರಿ ಮಾಡಲಾಗಿದೆಯೆಂದೂ, ಪ್ರಿನ್ಸಿಪಾಲರಿಗೆ ಬುದ್ಧಿ ಹೇಳಬೇಕೆಂದೂ ಅಹವಾಲು ಸಲ್ಲಿಸಿದರು. ನನ್ನ ಕೀರ್ತಿ ಪತಾಕೆಯನ್ನು ಬೇರೊಬ್ಬರು ಹಾರಿಸುವುದನ್ನು ನೋಡುವಾಸೆ ನನಗಿತ್ತಾದರೂ ಇದೇನೊ ತಟವಟವಿದೆಯೆಂದು ಹುಶಾರಾದೆ. 'ನಾನೆಷ್ಟದಾರೂ ಗೆಸ್ಟು. ನಿಮ್ಮ ವ್ಯಾಜ್ಯದೊಳಗೆ ನನ್ನನ್ನು ಎಳೆಯಬೇಡಿ' ಎಂದು ಕೈಮುಗಿದೆ. ಅವರು ತಮ್ಮ ಹಸ್ತವನ್ನು ಚಾಕುವಿನಂತೆ ನನ್ನ ಮೂತಿಗೆ ಚಾಚಿ, 'ನನ್ನ ಪರಿಚಯ ಭಾಷಣವಿಲ್ಲದೆ ಅದೆಂಗ ಫಂಕ್ಷನ್ ನಡಿಯತ್ತೊ ನೋಡ್ತೀನಿ' ಎಂದು ಹೇಳಿ ಕೇರೆಹಾವಿನಂತೆ ಕಣ್ಮರೆಯಾದರು. ನನ್ನ ಚಾಲಕನು 'ಸಾರ್ ಗಲಾಟೆ ಆಗೊ ಲಕ್ಷಣ ಇದೆ. ಟ್ಯಾಕ್ಸಿಗೇನಾದರೂ ಜಖಂ ಆದರೆ ಮಾಲಕ ಪಗಾರದಲ್ಲಿ ಕಟ್ ಮಾಡ್ತಾನೆ' ಎಂದು ಮುಖ ಚಿಕ್ಕದು ಮಾಡಿದನು. ಅವನಿಗೆ ಧೈರ್ಯ ತುಂಬಿ, ಹೇಡಿಯಂತೆ ರಣರಂಗ ಬಿಟ್ಟು ಓಡದೆ, ದೇವರಿಟ್ಟದ್ದಾಗಲಿ ಎಂದು ಗಟ್ಟಿಮನಸ್ಸು ಮಾಡಿಕೊಂಡು ಕಳವನ್ನು ಪ್ರವೇಶಿಸಿದೆ.

ವೇದಿಕೆಯೇರಿ ಪುಕುಪುಕು ಅನ್ನುತ್ತಿದ್ದ ಜೀವ ಸಂಭಾಳಿಸಿಕೊಂಡು ಸಭಾಂಗಣದ ಮೇಲೆ ಹಕ್ಕಿನೋಟ ಬೀರುತ್ತ ಬಂದೆ. ಮೊದಲ ಸಾಲಿನ ತುದಿಗೆ ಭಾಷಣದ ಹಾಳೆಗಳನ್ನು ಲಟ್ಟಣಿಗೆ